■ ಶಶಿಕುಮಾರ್ ಸಿ.

# ಮನುಷ್ಯನಿಗಿಂತ ಬುದ್ಧಿವಂತ ‘ಎಜಿಐ’

2030ರ ವೇಳೆಗೆ ಆರ್ಟಿಫಿಷಿಯಲ್ ಜನರಲ್ ಇಂಟೆಲಿಜೆನ್ಸ್ (ಎಜಿಐ) ಮಾನವನ ಬುದ್ಧಿವಂತಿಕೆ, ಯೋಚಿಸಿ ಪ್ರತಿಕ್ರಿಯಿಸುವ ವಿಧಾನವನ್ನು ಮೀರಿ ಬೆಳೆಯಲಿದೆ.

ಹೀಗೆಂದು ಭವಿಷ್ಯ ನುಡಿದಿರುವುದು ಗೂಗಲ್ ಡೀಪ್‌ಮೈಂಡ್. ಮನುಷ್ಯನ ಬುದ್ಧಿವಂತಿಕೆಯನ್ನು ಮೀರಿ ಬೆಳೆಯಲಿರುವ ‘ಎಜಿಐ’, ಮಾನವೀಯತೆಗೆ ಅಪಾಯವನ್ನುಂಟು ಮಾಡುತ್ತದೆ ಎಂದು ಗೂಗಲ್ ಡೀಪ್‌ಮೈಂಡ್ ಈಚೆಗೆ ಹೇಳಿದೆ. ಎಜಿಐ ಕುರಿತಾದ ಹೊಸ ಸಂಶೋಧನೆಯ ಫಲಿತಾಂಶಗಳನ್ನು ವಿಶ್ಲೇಷಿಸಿರುವ ಗೂಗಲ್ ಡೀಪ್‌ಮೈಂಡ್ ಈ ತೀರ್ಮಾನಕ್ಕೆ ಬಂದಿದೆ.

ಈಗ ಎಲ್ಲೆಡೆ ಕೃತಕ ಬುದ್ಧಿಮತ್ತೆಯ ಲೋಕವೇ ಕಾಣುತ್ತಿದೆ. ಇದು ಪ್ರತಿಯೊಂದು ಕ್ಷೇತ್ರದಲ್ಲೂ ಕ್ರಾಂತಿಕಾರಿ ಬದಲಾವಣೆಗಳನ್ನು ತರುತ್ತಿದೆ. ಇದರ ಮೇಲೆಯೇ ಮಾನವ ಜೀವನ ಆಶ್ರಯವಾಗುವಂತೆ ಬದಲಾವಣೆ ಮಾಡುತ್ತಿದೆ. ಇದರಿಂದ ಅನೇಕ ಪ್ರಯೋಜನಗಳು ಆಗುತ್ತಿದ್ದರೂ, ಮುಂದಿನ ದಿನಗಳಲ್ಲಿ ಹೆಚ್ಚಿನ ಹಾನಿ ಸಂಭವಿಸಬಹುದು ಎಂದು ತಜ್ಞರು ಎಚ್ಚರಿಸುತ್ತಿದ್ದಾರೆ.

ಎಜಿಐ ಮಾನವ ಮಟ್ಟದ ಬುದ್ಧಿಮತ್ತೆ ಮತ್ತು ಅದಕ್ಕೂ ಮೀರಿದ ಸಾಮರ್ಥ್ಯವನ್ನು




ಪಡೆದಿದ್ದೇ ಆದಲ್ಲಿ, ಅದು ಮನುಷ್ಯನಲ್ಲಿರುವಂತಹ ಮಾನವೀಯತೆ ಗುಣಕ್ಕೆ ತದ್ವಿರುದ್ಧವಾಗಿ ವರ್ತಿಸಲಿದೆ. ಈ ಸಂಬಂಧಿತ ಸಂಶೋಧನಾ ಪ್ರಬಂಧದಲ್ಲಿ ಮುಂದುವರಿದ ಎಐನ ಅಪಾಯಗಳು ಮತ್ತು ಬೆದರಿಕೆಗಳನ್ನು ದುರುಪಯೋಗ, ತಪ್ಪು ಜೋಡಣೆ, ತಪ್ಪುಗಳು ಮತ್ತು ರಚನಾತ್ಮಕ ಅಪಾಯಗಳು ಎಂದು ನಾಲ್ಕು ವರ್ಗಗಳಾಗಿ ವಿಂಗಡಿಸಲಾಗಿದೆ.

ಡೀಪ್‌ಮೈಂಡ್ ಸಹ ಸಂಸ್ಥಾಪಕ ಮತ್ತು ಈ ಸಂಶೋಧನೆಯ ಸಹ ಲೇಖಕ ಶೇನ್ ಲೆಗ್ ಪ್ರಕಾರ, ಈ ಅಧ್ಯಯನವು ಎಜಿಐ ಮಾನವೀಯತೆಗೆ ಹೇಗೆ ಹಾನಿ ಮಾಡುತ್ತದೆ ಎಂಬುದನ್ನು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಎಜಿಐ ಬೆದರಿಕೆ ತಗ್ಗಿಸಲು ಗೂಗಲ್ ಮತ್ತು ಇತರ ಎಐ ಕಂಪನಿಗಳು ತೆಗೆದುಕೊಳ್ಳಬಹುದಾದ ಕ್ರಮಗಳನ್ನು ಸೂಚಿಸಿದೆ ಎಂದಿದ್ದಾರೆ.

ಡೀಪ್‌ಮೈಂಡ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡೆಮಿಸ್ ಹಸ್ಸಾಬಿಸ್ ಈಚೆಗೆ, ಮನುಷ್ಯರಿಗಿಂತ ಬುದ್ಧಿವಂತ ಎಜಿಐ ಬರುತ್ತಿದೆ. ಮುಂದಿನ ಐದು ಅಥವಾ ಹತ್ತು ವರ್ಷಗಳಲ್ಲಿ ಅದು ಚಾಲ್ತಿಗೆ ಬರಲಿದೆ ಎಂದಿದ್ದರು.

### ಏನಿದು ಎಜಿಐ?

ಆರ್ಟಿಫಿಷಿಯಲ್ ಜನರಲ್ ಇಂಟೆಲಿಜೆನ್ಸ್, ಈಗಿರುವ ಕೃತಕ ಬುದ್ಧಿಮತ್ತೆಗಿಂತ ತುಂಬಾನೇ ಮುಂದಿರಲಿದೆ. ಎಐ ಕಾರ್ಯ ನಿರ್ದಿಷ್ಟವಾಗಿದ್ದರೂ ಎಜಿಐನ ಕಾರ್ಯವು ಮಾನವ ಬುದ್ಧಿವಂತಿಕೆಯಂತೆಯೇ ವ್ಯಾಪಕವಾಗಿರಲಿದೆ. ಎಜಿಐ ಮಾನವರಂತೆಯೇ ವಿವಿಧ ಕ್ಷೇತ್ರಗಳಿಂದ ಜ್ಞಾನವನ್ನು ಅರ್ಥಮಾಡಿಕೊಳ್ಳುವ, ಕಲಿಯುವ ಮತ್ತು ಅದಕ್ಕೆ ತಕ್ಕಂತೆ ಪ್ರತಿಕ್ರಿಯಿಸುವ ಸಾಮರ್ಥ್ಯ ಹೊಂದಲಿದೆ. ■

# ಆಧಾರ್ ಇನ್ನಷ್ಟು ಸರಳ

ಯುಪಿಐ ಪಾವತಿಯಂತೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಆಧಾರ್ ದೃಢೀಕರಣ ಮಾಡಬಹುದು. ಜೊತೆಗೆ ಫೇಸ್ ಐಡಿ ವೆರಿಫಿಕೇಷನ್ ಸಹ ಕ್ಷಣಾರ್ಧದಲ್ಲಿ ಮಾಡಬಹುದು.

ಹೌದು, ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಈಚೆಗೆ ನವದೆಹಲಿಯಲ್ಲಿ ಹೊಸದಾಗಿ ಬಿಡುಗಡೆ ಮಾಡಿದ ಪರಿಷ್ಕೃತ ಆಧಾರ್ ಆ್ಯಪ್‌ನಲ್ಲಿ ಲಭ್ಯವಿರುವ ವಿಶೇಷ ಫೀಚರ್‌ಗಳಿವು.

ಜನಸ್ನೇಹಿ ಡಿಜಿಟಲ್ ಸೌಲಭ್ಯ ಮತ್ತು ಸಾರ್ವಜನಿಕರ ಖಾಸಗಿ ಮಾಹಿತಿಯ ಗೌಪ್ಯತೆ ದೃಷ್ಟಿಯಿಂದ ಹೊಸದಾಗಿ ಆಧಾರ್ ಆ್ಯಪ್ ಪರಿಚಯಿಸಲಾಗಿದೆ. ಇದು ಬಳಕೆದಾರರಿಗೆ ತಮ್ಮ ಆಧಾರ್ ಕಾರ್ಡಿನ ವಿವರಗಳನ್ನು ಡಿಜಿಟಲ್ ಆಗಿ ದೃಢೀಕರಿಸಲು ಮತ್ತು ಹಂಚಿಕೊಳ್ಳಲು ನೆರವಾಗುತ್ತದೆ. ಇದಿದ್ದರೆ ಭೌತಿಕ ಕಾರ್ಡ್ ಅಥವಾ ಫೋಟೊಕಾಪಿಗಳ ಔಚಿತ್ಯವಿರುವುದಿಲ್ಲ ಎಂಬುದು ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರದ (ಯುಐಡಿಎಐ) ಮಾತು.

ಆನ್‌ಲೈನ್ ಪೇಮೆಂಟ್ಸ್ ಆ್ಯಪ್‌ಗಳಲ್ಲಿ ಯುಪಿಐ ಪಾವತಿ ಮಾಡುವಂತೆಯೇ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಈಗ ಸುಲಭವಾಗಿ ಆಧಾರ್ ದೃಢೀಕರಣ ಮಾಡಬಹುದಾಗಿದ್ದು, ಅಷ್ಟರಮಟ್ಟಿಗೆ ಈ ಆ್ಯಪ್ ಬಳಕೆದಾರಸ್ನೇಹಿ ಆಗಿರಲಿದೆ. ಅತ್ಯಾಧುನಿಕ ತಂತ್ರಜ್ಞಾನಕ್ಕೆ ಒಗ್ಗಿಕೊಳ್ಳುವುದು ಬಹುಮುಖ್ಯ ಎಂದು ಅಭಿಪ್ರಾಯಪಟ್ಟ ಕೇಂದ್ರ ಸಚಿವರು, ಹೊಸ ಆ್ಯಪ್, ಆಧಾರ್ ದೃಢೀಕರಣವನ್ನು ಸುಲಭವಾಗಿ, ವೇಗವಾಗಿ ಮತ್ತು ಸುರಕ್ಷಿತವಾಗಿ ಮಾಡುವ ದಕ್ಷತೆ ಹೊಂದಿದೆ ಎಂದರು.

ಈ ಆ್ಯಪ್‌ನಲ್ಲಿ ಆಧಾರ್ ಬಳಕೆದಾರರು ಸುರಕ್ಷಿತವಾಗಿ ಡಿಜಿಟಲ್ ವಿಧಾನದ ಮೂಲಕ ಅಗತ್ಯವಿರುವ ಮಾಹಿತಿಯನ್ನಷ್ಟೇ ಹಂಚಿಕೊಳ್ಳಬಹುದಾಗಿದೆ. ಉದಾಹರಣೆಗೆ ಜನ್ಮದಿನಾಂಕ, ವಯಸ್ಸು, ವಿಳಾಸ, ಫೋಟೊ ಹಾಗೂ ಮೊಬೈಲ್ ಸಂಖ್ಯೆ ದೃಢೀಕರಣಕ್ಕಾಗಿ ಆಧಾರ್ ಕಾರ್ಡ್‌ನಲ್ಲಿ ಲಭ್ಯವಿರುವ ಅಗತ್ಯವಿರುವ ಮಾಹಿತಿಯ ಹೊರತಾಗಿ ಉಳಿದ ಮಾಹಿತಿಯನ್ನು ಮರೆಮಾಚಿ ಡಿಜಿಟಲ್ ರೂಪದಲ್ಲಿ ಹಂಚಿಕೊಳ್ಳಬಹುದು. ಇದು ಕಾನೂನುಬದ್ಧವಾಗಿದೆ. ಈ ಅವಕಾಶ ಕಲ್ಪಿಸಿರುವುದರಿಂದ ಬಳಕೆದಾರರು ತಮ್ಮ ವೈಯಕ್ತಿಕ ಮಾಹಿತಿಯ ಮೇಲೆ ಸಂಪೂರ್ಣ ನಿಯಂತ್ರಣ ಹೊಂದುವಂತಾಗಿದೆ.

ಮುದ್ರಿತ ಪ್ರತಿಗಳನ್ನು (ಭೌತಿಕ ಕಾರ್ಡ್) ಎಲ್ಲ ಕಡೆ ತೆಗೆದುಕೊಂಡು ಹೋಗಿ, ಪ್ರಚುರಪಡಿಸುವುದನ್ನು ತಪ್ಪಿಸುವುದು ಹೊಸ ಆ್ಯಪ್‌ನ ಮುಖ್ಯ ಉದ್ದೇಶ. ಇನ್ನು ಮುಂದೆ, ಹೋಟೆಲ್‌ಗಳು, ಅಂಗಡಿಗಳು, ವಿಮಾನ ನಿಲ್ದಾಣಗಳು ಅಥವಾ ಇತರ ದೃಢೀಕರಣ ಸ್ಥಳಗಳಲ್ಲಿ ಆ್ಯಪ್ ಮೂಲಕವೇ ಆಧಾರ್ ವೆರಿಫಿಕೇಷನ್ ಮಾಡಬಹುದಾಗಿದೆ.

ಆಧಾರ್ ವಿವರಗಳನ್ನು ಫೋರ್ಜರಿ ಮಾಡುವುದು ಮತ್ತು ಬೇಕಾಬಿಟ್ಟಿ ಎಡಿಟ್ ಮಾಡುವುದನ್ನು ತಡೆಯುವುದರ ಜೊತೆಗೆ ದುರುಪಯೋಗವಾಗದಂತೆ ನಿಗಾವಹಿಸುವ ಕಾರ್ಯವನ್ನು ಆ್ಯಪ್ ಮಾಡುತ್ತದೆ. ಬಳಕೆದಾರರ ಅನುಮತಿಯ ಮೇರೆಗೆ ಸುರಕ್ಷತಾ ಕ್ರಮಗಳನ್ವಯ ಮಾಹಿತಿ ಹಂಚಿಕೊಳ್ಳಲು ಸಹಾಯಕವಾಗಲಿದೆ.

ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರವು ಈ ಆ್ಯಪ್ ಅನ್ನು ಆ್ಯಂಡ್ರಾಯ್ಡ್ ಮತ್ತು ಐಒಎಸ್‌ಗೆ ಬಿಡುಗಡೆ ಮಾಡಿದೆ. ಟೆಸ್ಟಿಂಗ್ ಹಂತದಲ್ಲಿರುವ ಈ ಆ್ಯಪ್ ಅನ್ನು ಆಧಾರ್ ಬಳಕೆದಾರರು ಮಾತ್ರ ಗೂಗಲ್ ಪ್ಲೇ ಸ್ಟೋರ್ ಮತ್ತು ಆ್ಯಪಲ್ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಬಹುದು. ■